Reopening of Primary Schools after summer vacation in Raichur District

*Q —288. Sri KANTHA RAO (Kushtagi).—

Will the Government be pleased to state:—

whether they will postpone the reopening of Primary Schools in Raichur District, till the first week of June as was done last year, in view of the fact that there will be very hot summer at Raichur in the month of May ?

A.—Sri S. R. KANTHI (Minister for Education) —

No. As the Primary Schools in Raichur District have already commenced functioning during the morning hours till first June, the question of postponement of their reopening in the said area during 1962 does not now arise.

ಶ್ರೀ ಕಾಂತರಾವ್.—ಈ ವರ್ಷ ಅಂತೂ ಷುರು ಆಯಿತು. ಮುಂದಿನ ವರ್ಷಕ್ಕೆ ಆದರೂ ಈ ಬಗ್ಗೆ ವ್ಯವಸ್ಥೆ ಮಾಡಲಕ್ಕೆ ತಯಾರಾಗಿದ್ದೀರಾ ?

†ಶ್ರೀ ಎಸ್. ಆರ್. ಕಂಠಿ.—ಮುಂದಿನ ವರ್ಷ ತಾವು ಹೇಳಿದಂತೆ ಜೂನ್ ಮೊದಲನೇ ತಾರೀಖಿನ ವರೆಗೂ ರಜೆ ಇರುತ್ತದೆ.

ಶ್ರೀ ಗಂಗಾಧರ ನಾಮೋಷಿ.—ಮೇ ತಿಂಗಳಿನಲ್ಲಿ ನ್ಕೂಲು ಪ್ರಾರಂಭ ಮಾಡಬಾರದು ಎಂದು ಯಾರಿಂದ ರಾದರೂ ಅರ್ಜಿ ಬಂದಿತ್ತೇ ?

ಶ್ರೀ ಎಸ್. ಆರ್. ಕಂಠಿ.—ಜನರರ್ ಸೆಕ್ರೆಟರಿ ಪ್ರೈಮರಿ ಟೀಚರ್ಸ್ ಅಸೋಸಿಯೇಷನ್, ಗುಲ್ಬರ್ಗ ಅವರಿಂದ 7ನೇ ಮೇ 1962ರಲ್ಲಿ ಅರ್ಜಿ ಬಂದಿತ್ತು. ಅವರು ಜೂನ್ ಮೊದಲನೇ ತಾರೀಖಿನವರೆಗೂ ಶಾಲೆಗೆ ರಜೆ ಕೊಡಬೇಕೆಂದು ಕೇಳಿದ್ದರು.

ಶ್ರೀ ಗಂಗಾಧರ ನಾಮೋಷಿ.—ಆ ಅರ್ಜಿಯ ಮೇಲೆ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ ?

ಶ್ರೀ ಎಸ್. ಆರ್. ಕಂಠಿ.—ಅದು ಬಹಳ late ಆಗಿ ಬಂತು. ಮುಂದಿನ ವರ್ಷದಿಂದ ಜೂನ್‌ನಿಂದ ಪ್ರಾರಂಭವಾಗುತ್ತದೆ.

Sri G. VENKATAI GOWDA.—The Government has received the letter of the General Secretary of Primary Teachers Association, Gulbarga, on the 7th and so they could have taken a decision by 22nd May.

ಶ್ರೀ ಎಸ್. ಆರ್. ಕಂಠಿ.—ಸೂಟಿ ಏಪ್ರಿಲ್ ತಿಂಗಳಿನಿಂದ ಪ್ರಾರಂಭವಾಗುತ್ತದೆ.

Sri G. VENKATAI GOWDA.—Does the Minister mean that the school was functioning during April ?

ಶ್ರೀ ಎಸ್. ಆರ್. ಕಂಠಿ.—ರಜೆ ಪ್ರಾರಂಭವಾಗಿತ್ತು. ಅವರ ಅರ್ಜಿ ಬಂದದ್ದು ಮೇ 7ರಲ್ಲಿ. 22 ಮೇ ವರೆಗೂ ರಜೆ ಇತ್ತು.

Development of Hessaraghatta Poultry Farm during Third Five-Year Plan.

*Q.—201. Sri SHARANAPPA (eodurg)—.

Will the Government be pleased to state:—

(*a*) the present strength of the staff, both ministerial and executive, working in Hessarghatta Poultry Farm;

(*b*) whether they consider that the present staff is enough to manage this farm;

(*c*) the amenities provided for the staff, such as residential quarters, etc.;

(*d*) whether they consider the equipment supplied to the farm is sufficient to meet the requirements;

(*e*) whether the farm has any developmental programme in the III Five-Year Plan; and if so, details may be furnished ?

A.—Sri M. V. KRISHNAPPA (Minister for Revenue).—

(*a*) 8 (Eight).

(*b*) No.

(*c*) Quarters have been provided to some of the officials. Majority of officials do not have quarters to live in. The Accountant, Poultry Supervisor and Poultry Assistants are temporarily accommodated in labour quarters which are not suitable and convenient to the officials.

(*d*) No.

(*e*) Yes. The details are being worked out. A provision of Rs. 2 lakhs has been made for this purpose under III Five-Year Plan.

ಶ್ರೀ ಶರಣಪ್ಪ.—ಈ ಹೆನರುಘಟ್ಟದ ಫಾರಂ ಎನ್ಟಾಬ್ಲಿಷ್ ಆಗಿ ಬಹಳ ದಿವಸವಾದರೂ ಕೂಡ ಅಲ್ಲಿ ಸಿಬ್ಬಂದಿ ಹೆಚ್ಚಾಗಿಲ್ಲ ಮತ್ತು ಸಿಬ್ಬಂದಿಗೆ ಸರಿಯಾದ ಕ್ವಾರ್ಟರ್ಸ್ ಒದಗಿಸಿಲ್ಲ ಎಂದು ಹೇಳುತ್ತೀರಿ, ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಫಾರಂ ಬಹಳ ದೊಡ್ಡದು. ಕೋಳಿಗಳು ಬಹಳ ಬೇಗ ಬೆಳೆಯುತ್ತವೆ. ಟೆಕ್ನಿಕಲ್ ಸ್ಟ್ಯಾಫ್ ಬೇಕು, ಸಿಕ್ಕಲಿಲ್ಲ. ಇಷ್ಟರಲ್ಲೇ ಏರ್ಪಾಡು ಮಾಡುತ್ತೇವೆ. ಮನೆಗಳನ್ನು ಕಟ್ಟುವುದಕ್ಕೂ ಮತ್ತು ಸಾಕಷ್ಟು ಸಿಬ್ಬಂದಿ ಹಾಕುವುದಕ್ಕೂ ಏರ್ಪಾಡು ನಡೆಯುತ್ತಾ ಇದೆ.

2-00 P.M.

ಶ್ರೀ ಕುಂದೂರು ರುದ್ರಪ್ಪ.—ಬಹಳ ದಿವಸಗಳಿಂದ ಬೆಳೆದಿದೆಯೆಂದು ಹೇಳಿದಿರಿ. ಇದಕ್ಕೆ ಸರ್ಕಾರದಿಂದ ಬಂಡವಾಳ ಎಷ್ಟು ಹಾಕಿದ್ದೀರಿ, ಎಷ್ಟು ಉತ್ಪತ್ತಿ ಬಂದಿದೆ ?